


# ಕೃಷಿ ಅನ್ನೋದು ಖುಷಿ ಕೊಡುತ್ತದೆ

**ಅನಿಲ್ ಕುಮಾರ್ ಬಿ.ಆರ್.**

**ಸೂಪರ್ ಕನ್ನಡದ 'ಬಂಗಾರಿ'ಯ ಶಂಕರ್**

★ *ನಟನಾಗಿದ್ದು ಹೇಗೆ?*

ಮೂಲತಃ ತಿಪಟೂರು ನಮ್ಮೂರು. ತಂದೆ ಬಿ.ಎಲ್. ರಂಗಪ್ಪ ವಕೀಲ ಮತ್ತು ನೋಟರಿ ಆಗಿದ್ದರು. ಅಮ್ಮ ಪುಟ್ಟಮ್ಮ. ಬಿಕಾಂ ಫೇಲ್ ಆಗಿ ಅಲೆಯುತ್ತಿದ್ದೆ. ಯಾವ ಕೆಲಸವೂ ಕೈಗೆ ಹತ್ತಲಿಲ್ಲ. ನಟನೆಯ ಗೀಳು ನನ್ನಲ್ಲಿ ಟಿಸಿಲೊಡೆದಿತ್ತು. ತಿಪಟೂರಿನ ವೃತ್ತಿಪರ ರಂಗ (ಪೊಥಿಯೊ) ತಂಡದಲ್ಲಿಯೇ ನಟನಾಗಿದ್ದೆ. ಸುತ್ತಾಟವನ್ನೂ ಮಾಡುತ್ತಿದ್ದೆ. ನನ್ನ ಈ ರೂಪಾಂತರಕ್ಕೆ ಕಾರಣವಾಗಿದ್ದು ರಂಗ ತಜ್ಞ ನಟರಾಜ ಹೊನ್ನವಳ್ಳಿ ಹಾಗೂ ನಟರಾದ ಅಚ್ಯುತ್, ಧರ್ಮೇಂದ್ರ ಅರಸು. ಒಮ್ಮೆ ಹೀಗೆ ಗೆಳೆಯರು ನೀನಾಸಂ ರಂಗ ಶಿಕ್ಷಣಕ್ಕೆ ಹೋಗುವ ಬಗ್ಗೆ ಒತ್ತಾಯಿಸಿದರು. ಆಗ ನನ್ನ ಅಮ್ಮ 'ಎಲ್ಲದೂ ಆಯಿತು ಇದೊಂದಕ್ಕೆ ಹೋಗಿ ಬಾ ಮಗ' ಅಂದು ಕಳುಹಿಸಿದರು. ಅಲ್ಲಿಂದ ನಟನೆಯೇ ಬದುಕಾಯಿತು. ಈಗ ಎಲ್ಲಾ ರೀತಿಯಿಂದಲೂ ಆರಾಮಾಗಿದ್ದೇವೆ.

★ *ರಂಗಭೂಮಿ– ಕಿರುತೆರೆಯ ನಟನೆಯ ಕುರಿತು ಹೇಳುವುದಾದರೆ..*

ಅಭಿನಯದ ದೃಷ್ಟಿಯಿಂದ ಹೆಚ್ಚಿನ ವ್ಯತ್ಯಾಸ ಇಲ್ಲ. ಎರಡೂ ಒಂದೇ. ಆದರೆ ಕಿರುತೆರೆ ಸ್ವಲ್ಪ ಕಮರ್ಷಿಯಲ್ ಆಗಿರುತ್ತದೆ. ನಟನೊಬ್ಬನಿಗೆ ರಂಗದ ಮೇಲೆ ಆಡುವುದು ಸುಲಭವೂ ಅನುಕೂಲಕರವೂ ಆಗಿರುತ್ತದೆ. ಸಾಮಾನ್ಯವಾಗಿ ರಂಗಸಜ್ಜಿಕೆ ಇರುವುದು ಇಳಿಹೊತ್ತಿನಲ್ಲಿ. ಟಿವಿಯಲ್ಲಿ ಹಾಗಾಗುವುದಿಲ್ಲ ಕೆಲವಕ್ಕೆ ಬೆಳಿಗ್ಗೆ ಬಣ್ಣ ಹಚ್ಚಿಕೊಳ್ಳಬೇಕು. ಒಮ್ಮೊಮ್ಮೆ ಮಧ್ಯರಾತ್ರಿಯವರೆಗೂ ಬಣ್ಣ ಮಾಸದಂತೆ ನೋಡಿಕೊಳ್ಳಬೇಕು. ಇದು ಬೇರೆ ರೀತಿಯಲ್ಲಿ ಶ್ರಮದಾಯಕ ಎನಿಸುತ್ತದೆ. ವೈಯಕ್ತಿಕವಾಗಿ ನನ್ನ ಬಗ್ಗೆ ಹೇಳಬೇಕು ಎಂದರೆ ರಂಗಭೂಮಿಗೆ ಕಾಲಿಟ್ಟಾಗ ಇನ್ನೂ ನಾನು ಹುಡುಗ. ಅಲ್ಲಿ ಶಿಸ್ತು ಕಲಿತೆ. ಅದು ಎಲ್ಲವನ್ನೂ ಕಲಿಸುತ್ತದೆ ಎನ್ನುವುದಕ್ಕೆ ನಾನೇ ಸಾಕ್ಷಿ.

★ *ಬೇರೆ ಇನ್ನಾವುದೇ ಸಾಧ್ಯತೆಗಳ ಬಗ್ಗೆ ಯೋಚಿಸಿದ್ದೀರಾ?*

ಬಣ್ಣ ಹಾಕೋದು ಬಿಟ್ರೆ ನನಗೆ ಬೇರೆ ಯಾವ ಕೆಲಸವೂ ಗೊತ್ತಿಲ್ಲ. ನಟನೆಯೊಂದೆ ನನ್ನ ಕ್ರಿಯಾಶೀಲ ಮಾಧ್ಯಮ. ಅದು ಬಿಟ್ಟರೆ ಉದ್ಯಮ, ವ್ಯಾಪಾರ, ನಿರ್ದೇಶನ ಎಂದು ಬೇರೆ ಇನ್ನೇನೂ ಮಾಡುವುದಿಲ್ಲ. ನಮ್ಮದು ತೆಂಗಿನ ತೋಟ ಇದೆ. ಕಾಲೇಜು ದಿನಗಳಲ್ಲಿ ತೋಟದಲ್ಲಿ ದುಡಿಯುತ್ತಿದ್ದೆ. ಅದನ್ನು ಬಿಟ್ಟು 20 ವರ್ಷಗಳೇ ಕಳೆದು ಹೋಗಿವೆ. ಕೃಷಿ ಅನ್ನೋದು ಖುಷಿ ಕೊಡುತ್ತದೆ. ಇನ್ನು ಮುಂದೆ ಅದರತ್ತ ಗಮನ ಹರಿಸಿ ಮನೆ– ತೋಟವನ್ನು ನೋಡಿಕೊಂಡು ನೆಮ್ಮದಿಯ ಜೀವನ ಮಾಡುತ್ತೇನೆ.

★ *'ಬಂಗಾರಿ'ಯ ಶಂಕರ್ ಹೇಗಿದೆ?*

ಇಬ್ಬರು ಹೆಣ್ಣು ಮಕ್ಕಳ ತಂದೆ ಶಂಕರ್. ಹಿರಿಯ ಮಗಳು ಕಾವೇರಿ ಮದುವೆಯ ದಿನ ಹಸೆಯಿಂದ ಓಡಿ ಹೋಗುತ್ತಾಳೆ. ಆ ಸಂದರ್ಭದಿಂದ ಜರ್ಜರಿತನಾದ ಆತ ಹೆಣ್ಣು ಮಕ್ಕಳೆಂದರೆ ಹೀಗೆ ಎನ್ನುವ ಸಿನಿಕತನದಿಂದ ಆತ ತನ್ನ ಎರಡನೇ ಮಗಳ ಬಗ್ಗೆ ಯಾವ ಕಾಳಜಿಯನ್ನು ವಹಿಸದೆ ತಾತ್ಸಾರದಿಂದ ಕಾಣುತ್ತಿರುತ್ತಾನೆ. ಕಥೆ ಈಗಷ್ಟೇ ಆರಂಭವಾಗಿದೆ. ಮುಂದಿನದು ತೆರೆಯಲ್ಲೇ ಕಾಣಬೇಕು.

★ *ನೀವು ಮದುವೆಯಾಗಿದ್ದು ಹೇಗೆ ಹೇಳಿ?*

ನಾನು ಮದುವೆಯಾಗಿದ್ದು ರಂಗ ಗೆಳತಿ ರತ್ನಾಳನ್ನು. ಆಕೆ ನೀನಾಸಂನಲ್ಲಿ ನನ್ನ ಸಹಪಾಠಿ. ಪ್ರೀತಿಸಿ ಮದುವೆ ಆದೆ. ಅದಾಗಿ ಹದಿಮೂರು ವರ್ಷಗಳು ಕಳೆದಿವೆ. ಹತ್ತು ವರ್ಷದ (ಸ್ಕಂದಿನಿ) ಮಗಳಿದ್ದಾಳೆ. 5ನೇ ತರಗತಿಯಲ್ಲಿ ಓದುತ್ತಿದ್ದಾಳೆ. ನನ್ನ ಪತ್ನಿ ನಟಿಯಾಗಿಲ್ಲ. ಅವಳ ಪಾಡಿಗೆ ಅವಳು ಜಾನಪದ– ರಂಗಗೀತೆಗಳನ್ನು ಹಾಡುವ ಅಭ್ಯಾಸ ಇಟ್ಟುಕೊಂಡಿದ್ದಾಳೆ. ಯಾವುದಾದರೂ ಕಾರ್ಯಕ್ರಮಗಳು ಸಿಕ್ಕರೆ ಹಾಡುತ್ತಾಳೆ. ಉಳಿದಂತೆ ಮನೆ, ಮಗಳು, ನನ್ನ ಪೋಷಣೆಗೆ ಅವಳು ಸಮಯವನ್ನು ಮೀಸಲಿಟ್ಟಿದ್ದಾಳೆ.

★ *ಬಾಲ್ಯವನ್ನು ಈ ಹೊತ್ತಿನಲ್ಲಿ ನೆನಸಿಕೊಂಡರೆ?*

ಈಗ ಅದೇ ಚೆಂದ ಅನ್ನಿಸುತ್ತದೆ. ಅಪ್ಪ– ಅಮ್ಮ ಯಾವುದಕ್ಕೂ ತೊಂದರೆ ಇಲ್ಲದಂತೆ ನೋಡಿಕೊಂಡರು. ನಮ್ಮ ತಂದೆಗೆ ಓದಿಸಬೇಕೆಂಬ ಒಲವು ಹೆಚ್ಚಿತ್ತು. ತುಂಬಾ ಚೆನ್ನಾಗಿ ಓದಿಸಲು ಪ್ರಯತ್ನ ಮಾಡಿದರು ನಾನು ಓದಲಿಲ್ಲ.

■ **ರಾಗು**